8) ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಜಂಟಿಯಾಗಿ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ ಮಾಧ್ಯಮಗಳಿಗೆ ಜಿಲ್ಲೆಯಲ್ಲಿ ಕೈಗೊಂಡಿರುವ ಕುಡಿಯುವ ನೀರು, ಜಾನುವಾರು ಸಂರಕ್ಷಣೆ, ಉದ್ಯೋಗ ಖಾತರಿ ಯೋಜನೆ ಮತ್ತು ಬರಪರಿಹಾರಕ್ಕೆ ಸಂಬಂಧಿಸಿದಂತೆ ಸಾಧಿಸಿರುವ ಪ್ರಗತಿಯ ಚಿತ್ರಣವನ್ನು ಬಿಂಬಿಸುವುದು. ಪತ್ರಿಕಾಗೋಷ್ಠಿಯಲ್ಲಿ ಸಿದ್ಧಪಡಿಸಿದ ಟಿಪ್ಪಣಿಯನ್ನು ಇ-ಮೇಲ್ ಮುಖಾಂತರ ಸರ್ಕಾರಕ್ಕೆ ರವಾನಿಸುವುದು. ಇ–ಮೇಲ್ ವಿಳಾಸ secyrelief-rev@karnataka.gov.in.

9) ಪ್ರತಿ ಹೋಬಳಿಗೆ ಒಬ್ಬ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯನ್ನು ನೇಮಿಸಿ ಅವರ ಮೂಲಕ ಬರಪರಿಹಾರ ಕಾಮಗಾರಿಗಳು, ಜಾನುವಾರು ಸಂರಕ್ಷಣೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳನ್ನು ವ್ಯಾಪಕವಾಗಿ ಪರಿಶೀಲನೆ ಮಾಡುವುದು.

10) ಮುಂದಿನ 2 ತಿಂಗಳುಗಳ ಕಾಲ ಕುಡಿಯುವ ನೀರು/ ಮೇವಿನ ಕೊರತೆ ಹಾಗೂ ಉದ್ಯೋಗಕ್ಕೆ ಕೊರತೆಯುಂಟಾಗದಂತೆ ಹಾಗೂ ಯಾವುದೇ ದೂರುಗಳು ಬರದಂತೆ ಕಾರ್ಯ ನಿರ್ವಹಿಸುವುದು.

11) ಪ್ರತಿಯೊಂದು ಕಾಮಗಾರಿಯ ಆರಂಭ, ಚಾಲ್ತಿಯಲ್ಲಿರುವ ಹಾಗೂ ಮುಕ್ತಾಯದ ಹಂತಗಳ ಛಾಯಾ ಚಿತ್ರಗಳನ್ನು ದಾಖಲಿಸಿ, ಮೂರನೇ ಹಂತದ ಪರಿವೀಕ್ಷಣೆಗೆ ಒಳಪಡಿಸಿ, ಅಂತಿಮ ಬಿಲ್ ಪಾವತಿ ಮಾಡುವುದು

12) ಪೂರ್ಣಗೊಂಡ ಪ್ರತಿಯೊಂದು ಕಾಮಗಾರಿಯ ಛಾಯಾ ಚಿತ್ರಗಳು ಹಾಗೂ ವೆಚ್ಚದ ವಿವರಗಳನ್ನು ಇ–ಮೇಲ್ ಮುಖಾಂತರ (secyrelief-rev@karnataka.gov.in) ಕಳುಹಿಸುವುದು.

13) ಪ್ರತಿಯೊಂದು ಕಾಮಗಾರಿಯ ವಿವರಗಳನ್ನು ಫಲಕದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಈ ಕೆಳಕಂಡ ಮಾದರಿಯಲ್ಲಿ ನಮೂದಿಸುವುದು.

ಪ್ರಕೃತಿ ವಿಕೋಪ ಕಾಮಗಾರಿ

ಕಾಮಗಾರಿಯ ಹೆಸರು:	
ಅಂದಾಜು ಮೊತ್ತ:	
ಕಾಮಗಾರಿ ಪ್ರಾರಂಭಿಸಿದ ದಿನಾಂಕ:	
ಕಾಮಗಾರಿ ಮುಕ್ತಾಯವಾದ ದಿನಾಂಕ:	
ಅನುಷ್ಠಾನಗೊಳಿಸಿದ ಸಂಸ್ಥೆ:	

14) ಪ್ರತಿ ತಿಂಗಳು ಅಂತ್ಯಕ್ಕೆ ಅನುದಾನ ಬಳಕೆಯಾದ ವಿವರಗಳನ್ನು ಮೇಲ್ಕಂಡ ಇ–ಮೇಲ್ ಮುಖಾಂತರ ಸಲ್ಲಿಸುವುದು. ಬಳಕೆ ಪ್ರಮಾಣ ಪತ್ರಗಳನ್ನೂ ಸಹ ತಪ್ಪದೇ ಸರ್ಕಾರಕ್ಕೆ ರವಾನಿಸುವುದು.

15) ಪ್ರತಿ ತಿಂಗಳು ಸಾಧಿಸಿದ ಪ್ರಗತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹಾಗೂ ಪ್ರಾದೇಶಿಕ ಆಯುಕ್ತರ ಗಮನಕ್ಕೆ ತರುವುದು ಮತ್ತು ಅವರಿಂದ ಸಲಹೆ–ಸೂಚನೆಗಳನ್ನು ಪಡೆಯುವುದು.

16) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ ಎನ್.ಡಿ.ಆರ್.ಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ 2245–01–800–1–01–100 (ಯೋಜನೇತರ)ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ:ಆ.ಇ 475 ವೆಚ್ಚ–7/2012, ದಿನಾಂಕ: 17–05–2012ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎಂ. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ಸೇವೆಗಳು–2)

ಪಿ.ಆರ್. 1817

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಓದಲಾಗಿದೆ: ಬಾಗಲಕೋಟೆ ಜಿಲ್ಲಾಧಿಕಾರಿಗಳ ಪತ್ರ ಸಂ: ಸಿಎಎಲ್/ಸಿಆರ್/06/2010–11, ದಿನಾಂಕ: 02–05–2012. ಮತ್ತು 02–05–2012.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಬಾಗಲಕೋಟೆ ಜಿಲ್ಲಾಧಿಕಾರಿಗಳು ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಬಾದಾಮಿ ತಾಲ್ಲೂಕಿನ ಗೋನಾಳ, ಕಾಟಾಪೂರ, ಹೆಬ್ಬಳ್ಳಿ ಮತ್ತು ನಂದಿಕೇಶ್ವರ ಗ್ರಾಮಗಳಲ್ಲಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದು, ಈ ಡೀಸೆಲ್ ಜನರೇಟರ್‌ನಿಂದ ಪಡೆದಂತ ವಿದ್ಯುಚ್ಛಕ್ತಿಯನ್ನು ಮನೆ ನಿರ್ಮಾಣಕ್ಕೆ ನೀರನ್ನು ಒದಗಿಸಲು ಬಳಸಿಕೊಂಡಿರಲಾಗಿರುತ್ತದೆ. ಆದುದರಿಂದ, ಈ ಡೀಸೆಲ್ ಜನರೇಟರ್‌ನ ಬಾಡಿಗೆಯ ಬಾಬ್ತು ರೂ.4,94,010/–ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ: ಆರ್‌ಡಿ 400 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ: 18–06–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭದ ಹಿನ್ನಲೆಯಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಮತ್ತು ವಾಟರ್ ಟ್ಯಾಂಕರ್ ಬಾಬ್ತು ರೂ. 4,94,010/– (ರೂಪಾಯಿ ನಾಲ್ಕು ಲಕ್ಷದ ತ್ತೊಂಭತ್ತ ನಾಲ್ಕು ಸಾವಿರದ ಹತ್ತು ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235–00–111–0–02 `Public Contributions to the Calamity Relief` ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ (ಸಿಟಿಎಸ್–8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು. ಹಾಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎಂ. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ಸೇವೆಗಳು–2)

ಪಿ.ಆರ್. 1818

ಕಂದಾಯ ಸಚಿವಾಲಯ

ವಿಷಯ : ಶ್ರೀ ಗುರುಬಸಪ್ಪ ಮೇತ್ರಿ, ಹಿಂದಿನ ತಹಶೀಲ್ದಾರ್, ಹೂವಿನ ಹಡಗಲಿ ಹಾಗೂ ಹಾಲಿ ತಹಶೀಲ್ದಾರ್, ಇಂಡಿ ಅವರ ಮೇಲಿನ ಇಲಾಖಾ ವಿಚಾರಣೆ ಬಗ್ಗೆ ಆರೋಪಿತರನ್ನು ಆರೋಪಮುಕ್ತರನ್ನಾಗಿಸುವ ಕುರಿತು.

ಓದಲಾಗಿದೆ: 1) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆನಾಸ 153 ಆಇಸೇ 2010, ದಿನಾಂಕ: 15.02.2011

2) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಆರ್ ಡಿ 11 ಎಡಿಇ 2011 ದಿನಾಂಕ: 12.05.2011

3) ಶ್ರೀ ಗುರುಬಸಪ್ಪ ಮೇತ್ರಿ, ತಹಶೀಲ್ದಾರ್‌ರವರ ಲಿಖಿತ ಹೇಳಿಕೆ ದಿನಾಂಕ 17.09.2011

4) ಜಿಲ್ಲಾಧಿಕಾರಿ, ಬಿಜಾಪುರ ರವರ ಪತ್ರ ಸಂಖ್ಯೆ:ಕವಿ/ಸಿಬ್ಬಂದಿ/1/ವಿವ/9/2011–12, ದಿನಾಂಕ: 17.12.2011

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಅನಧಿಕೃತ ಟಿಪ್ಪಣಿಯಲ್ಲಿ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನಲ್ಲಿ ದಿನಾಂಕ 25.08.2009ರ ಅವಧಿಯಲ್ಲಿ ತಹಶೀಲ್ದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಶ್ರೀ ನರಸಿಂಗ ಶಿಕಾರಿ, ಆಹಾರ ನಿರೀಕ್ಷಕರು ಅವರು ಕರ್ತವ್ಯ ನಿರ್ಲಕ್ಷತೆ ಮಾಡಿದ್ದಾರೆ ಎಂಬ ಕಾರಣ ನೀಡಿ, ಮೇಲಧಿಕಾರಿಯವರಿಂದ ಯಾವುದೇ ಪೂರ್ವಾನುಮತಿ ಪಡೆಯದೇ ಅವರ ವಿರುದ್ಧ ದುರ್ನಡತೆ ಅಥವಾ ದುರ್ವ್ಯಹಾರದ ಆರೋಪ ಹೊರಿಸದೇ ಅಥವಾ ಇಲಾಖಾ ವಿಚಾರಣೆ ಪ್ರಾರಂಭಿಸದೇ ದಿನಾಂಕ 25.08.2009ರಂದು ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಶ್ರೀ ನರಸಿಂಗ ಶಿಕಾರಿರವರು ದಿನಾಂಕ:25.08.2009ರಿಂದ 18.09.2009ರವರೆಗೆ ಸ್ಥಳ ನಿಯುಕ್ತಿ ಇಲ್ಲದಂತೆ ಮಾಡಿ ವಿನಾಕಾರಣ ವೇತನ ಪಾವತಿಸುವ ಪ್ರಸಂಗ ಒದಗಿಬಂದ ಮೊತ್ತವನ್ನು ತಹಶೀಲ್ದಾರರಿಂದ ವಸೂಲು ಮಾಡುವ ಬಗ್ಗೆ ಕಂದಾಯ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸರ್ಕಾರವು ಶ್ರೀ ಗುರುಬಸಪ್ಪ ಮೇತ್ರಿ, ಹಿಂದಿನ ತಹಶೀಲ್ದಾರ್, ಹೂವಿನ ಹಡಗಲಿ ಹಾಗೂ ಹಾಲಿ ತಹಶೀಲ್ದಾರ್, ಇಂಡಿ ತಾಲ್ಲೂಕು, ಬಿಜಾಪು ಜಿಲ್ಲೆ ಅವರಿಗೆ ಕಾರಣ ಕೇಳುವ ನೋಟೀಸನ್ನು ದೋಷಾರೋಪಣೆ ಪಟ್ಟಿಯ ಅನುಬಂಧ–1 ರಿಂದ 4 ಗಳನ್ನು ಜಾರಿಗೊಳಿಸಿ, ಸದರಿ ನೋಟೀಸು ಸ್ವೀಕರಿಸಿದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ತಪ್ಪಿದ್ದಲ್ಲಿ ನಿಮ್ಮ ಪ್ರತಿವಾದವೇನೂ ಇಲ್ಲವೆಂದು ಭಾವಿಸಿ ಕ.ನಾ.ಸೇ(ವ.ನಿ ಮತ್ತು ಮೇ) ನಿಯಮ 1957 ರ ನಿಯಮ 11ನೇ ಮೇರೆಗೆ ಅವರ ಮೇಲೆ ಏಕಪಕ್ಷೀಯವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸರ್ಕಾರದ ದಿನಾಂಕ:12.05.2011ರ ಕಾರಣ ಕೇಳುವ ನೋಟೀಸಿಗೆ ಲಿಖಿತ ಉತ್ತರವನ್ನು ಸಲ್ಲಿಸಿ, ಶ್ರೀ ನರಸಿಂಗ ಶಿಕಾರಿ, ಆಹಾರ ಶಿರಸ್ತೇದಾರ್‌ರವರಿಗೆ ಸಾಕಷ್ಟು ಬಾರಿ ಸರ್ಕಾರಿ ಕೆಲಸದಲ್ಲಿ ಅಡೆತಡೆ ಮಾಡದೆ ಸಾರ್ವಜನಿಕರೊಂದಿಗೆ ಹಾಗೂ ಕಛೇರಿ ಸಿಬ್ಬಂದಿಯೊಂದಿಗೆ ಸರಿಯಾಗಿ ವರ್ತಿಸುವಂತೆ ತಿಳಿಸಿದ್ದರೂ ಅವರ ನಡವಳಿಕೆಯಲ್ಲಿ ಬದಲಾವಣೆಯಾಗಿರುವುದಿಲ್ಲ ಹಾಗೂ ಸರ್ಕಾರಿ ಕೆಲಸದಲ್ಲಿ ಅಸಡ್ಡೆ ವಹಿಸಿರುತ್ತಾರೆ ಅಲ್ಲದೇ 2009ರ ಲೋಕಸಭಾ ಚುನಾವಣೆಯಲ್ಲಿ ಶ್ರೀ ನರಸಿಂಗ ಶಿಕಾರಿ, ಆಹಾರ ಶಿರಸ್ತೇದಾರ್ ಬೇರೆ ಬೇರೆ ತಾಲ್ಲೂಕಿನಿಂದ ಬಂದಂತಹ ಮತಗಟ್ಟೆ ಅಧಿಕಾರಿಗಳೊಂದಿಗೆ ಸರಿಯಾಗಿ ವರ್ತಿಸದ ಕಾರಣ ಮತಗಟ್ಟೆ ಅಧಿಕಾರಿಗಳು ಸುಮಾರು 2 ಗಂಟೆಗಳ ಕಾಲ ರಸ್ತೆ ತಡೆ ಚಳುವಳ ನಡೆಸಿರುತ್ತಾರೆ. ಕಛೇರಿ ದೂರವಾಣಿಯ ದುರ್ಬಳಕೆ ಅಲ್ಲದೇ ಕೇಂದ್ರ ಸ್ಥಾನದಲ್ಲಿ ಇಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗಿರುವುದಾಗಿಯೂ ತಿಳಿಸಿರುತ್ತಾರೆ. ಇಟಗಿ ಹೋಬಳಿಯಲ್ಲಿ ಬೇರೆ ಕಡೆ ಜನಸ್ಪಂದನ ನಡೆದಾಗ ಹಿರೇಹಡಗಲಿಯಲ್ಲಿ ಸಾರ್ವಜನಿಕರು ಪಡಿತರ ಚೀಟಿ ವಿತರಣೆಯನ್ನು ವಿತರಿಸುವ ಬಗ್ಗೆ ಹಿರೇಹಡಗಲಿಯಲ್ಲಿ ರಸ್ತೆ ರೂಕೋ ಚಳುವಳಿ ಮಾಡುತ್ತಿದ್ದಾಗ ಅಲ್ಲಿಗೆ ತೆರಳುವುದಾಗಿ ತಿಳಿಸಿ ಅಲ್ಲಿಗೆ

ತೆರಳದೇ ಗುಲ್ಬರ್ಗಕ್ಕೆ ತೆರಳಿರುತ್ತಾರೆ. ತದನಂತರ ಹಿರೇಹಡಗಲಿಯಲ್ಲಿ ಅವರು ತೆರಳದೇ ಇರುವುದನ್ನು ಗಮನಿಸಿ ತಹಶೀಲ್ದಾರರೇ ಖುದ್ದಾಗಿ ಹೋಗಿ ಅವರ ಸಮಸ್ಯೆಗೆ ಸ್ಪಂದಿಸಿರುವುದಾಗಿ ತಿಳಿಸಿರುತ್ತಾರೆ. ಈ ವಿಷಯವನ್ನು ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬಳ್ಳಾರಿ ರವರಿಗೆ ತಿಳಿಸಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು ಹೂವಿನ ಹಡಗಲಿ ಪಟ್ಟಣದ ಎಲ್ಲಾ ಸೀಮೆಎಣ್ಣೆ ಪರವಾನಗಿಗಳನ್ನು ಅಮಾನತ್ತಿನಲ್ಲಿರಿಸಿ ಗ್ರಾಮದಲ್ಲಿ ಕಾನೂನು ಸುವ್ಯವಸ್ಥೆ ಕೆಡುವಂತೆ ಮಾಡಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬಳ್ಳಾರಿ ಹಾಗೂ ಜಿಲ್ಲಾಧಿಕಾರಿ, ಬಳ್ಳಾರಿ ಅವರ ಗಮನಕ್ಕೆ ತಂದು ಅವರನ್ನು ಕಛೇರಿಯಿಂದ ಬಿಡುಗಡೆ ಮಾಡಿರುವುದಾಗಿ ತಿಳಿಸಿ ಅವರ ಮೇಲಿನ ಆಪಾದನೆಗಳನ್ನು ಕೈಬಿಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರಲ್ಲಿ ಜಿಲ್ಲಾಧಿಕಾರಿ, ಬಿಜಾಪುರ ಅವರು ಶ್ರೀ ಗುರುಬಸಪ್ಪ ಮೇತ್ರಿ ಅವರು ಸಲ್ಲಿಸಿದ ವಿವರಣೆ ಪರಿಶೀಲಿಸಿ ಹಾಗೂ ಅವರ ಈಗಿನ ಕಾರ್ಯವನ್ನು ಗಮನಿಸಲಾಗಿ ಅವರು ಸಲ್ಲಿಸಿದ ವಿವರಣೆಯಲ್ಲಿನ ಅಂಶಗಳು ಸತ್ಯಾಂಶವಿರುವುದಾಗಿ ಅಭಿಪ್ರಾಯ ಪಟ್ಟಿರುತ್ತಾರೆ. ಸರ್ಕಾರವು ಆರೋಪಿತ ಅಧಿಕಾರಿ ನೀಡಿರುವ ಹೇಳಿಕೆ ಹಾಗೂ ಜಿಲ್ಲಾಧಿಕಾರಿಯವರ ವರದಿ ಒಪ್ಪಿಕೊಂಡು ಸದರಿ ಅಧಿಕಾರಿ ವಿರುದ್ಧ ಆಪಾದನೆ ಸಾಬೀತಾಗದಿರುವುದರಿಂದ ಅವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಗಳಿಂದ ಮುಕ್ತಗೊಳಿಸಲು ನಿರ್ಧರಿಸಿರುವುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಕಂಇ 11 ಎಡಿಇ 2011 ಬೆಂಗಳೂರು: ದಿನಾಂಕ:16.06.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಶ್ರೀ ಗುರುಬಸಪ್ಪ ಮೇತ್ರಿ, ಹಿಂದಿನ ತಹಶೀಲ್ದಾರ್, ಹೂವಿನ ಹಡಗಲಿ ಹಾಗೂ ಹಾಲಿ ತಹಶೀಲ್ದಾರ್, ಇಂಡಿ ಅವರ ವಿರುದ್ಧ ದಿನಾಂಕ 12.05.2011ರಂದು ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ: ಆರ್‌ಡಿ 11 ಎಡಿಇ 2011, ದಿನಾಂಕ: 12.05.2011ರಲ್ಲಿ ಹೊರಿಸಲಾದ ಆರೋಪಗಳಿಂದ ಮುಕ್ತಗೊಳಿಸಿ ಆದೇಶಿಸಿದೆ.

ಶ್ರೀ ಗುರುಬಸಪ್ಪ ಮೇತ್ರಿ, ಹಿಂದಿನ ತಹಶೀಲ್ದಾರ್, ಹೂವಿನ ಹಡಗಲಿ ಹಾಗೂ ಹಾಲಿ ತಹಶೀಲ್ದಾರ್, ಇಂಡಿ ಅವರು ಈ ಪ್ರಕರಣದ ಮಟ್ಟಿಗೆ ವಿಚಾರಣೆ ನಡೆಯದಿದ್ದಲ್ಲಿ ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ.ರಾಮಲಿಂಗಯ್ಯ

ಪಿ.ಆರ್. 1827

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ: ಶ್ರೀ ಜಗನ್ನಾಥ್ ಶಿರ್ಸೆ, ಹಿಂದಿನ ತಹಶೀಲ್ದಾರ್, ಬೀದರ್ ತಾಲ್ಲೂಕು ಅವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿಕೊಡುವ ಬಗ್ಗೆ.

ಓದಲಾಗಿದೆ: ಅಪರ ನಿಬಂಧಕರು ವಿಚಾರಣೆಗಳು–7, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಅವರ ಅ.ಸ.ಪತ್ರ ಸಂ: ಕಂಪ್ಲೇಂಟ್/ಉಪಲೋಕ್/ ಜಿಎಲ್‌ಬಿ–8199/2011/ಎಆರ್‌ಇ–7, ದಿನಾಂಕ: 17–04–2012.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದೊಂದಿಗೆ ಅಪರ ನಿಬಂಧಕರು ವಿಚಾರಣೆಗಳು–7, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರು ಶ್ರೀ ಜಗನ್ನಾಥ್ ಶಿರ್ಸೆ, ಅವರು ಬೀದರ್ ತಾಲ್ಲೂಕು ಕಛೇರಿಯಲ್ಲಿ ತಹಶೀಲ್ದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದ, ಅವರ ವಿರುದ್ಧ ಸ್ವೀಕೃತವಾದ ದೂರಿನ ಬಗ್ಗೆ ಪ್ರಾಥಮಿಕ ವಿಚಾರಣೆ ನಡೆಸಿ, ಮಾನ್ಯ ಉಪಲೋಕಾಯುಕ್ತರು ನೀಡಿರುವ ವರದಿಯನ್ನು ಕಳುಹಿಸಿ, ವರದಿಯ ಬಗ್ಗೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸಲು ಕೋರಿರುವರು.

ಸದರಿ ವರದಿಯನ್ನು ಪರಿಶೀಲಿಸಲಾಗಿ ಮೈಲಾತೆ ಗೈರಾಬಿಯ ಸ.ನಂ.14ರ ಸಂಬಂಧ ಬೀದರ್ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಮೂಲ ದಾವೆ ಸಂ.200/2002ರಲ್ಲಿ ವಾಟಣಿ ಮುಂತಾದ ಪರಿಹಾರ ಕೇಳಿ ದಾಖಲಾಗಿದ್ದು, ಅದರಲ್ಲಿ ಆದ ಡಿಕ್ರಿಯ ವಿರುದ್ಧ ಮಂಗಲಪೇಟೆಯ ಶ್ರೀ ಸಿದ್ರಾಮಪ್ಪನವರ ಮಕ್ಕಳಾದ ಶ್ರೀ ಬಸವರಾಜ ಮತ್ತು ಶ್ರೀ ಶರಣಪ್ಪ ಅವರು ಮೇಲ್ಮನವಿ ಅಂದರೆ ಆರ್.ಎ.ಸಂ.5/2010ರಲ್ಲಿ ಪ್ರಶ್ನಿಸಿ ತಡೆಯಾಜ್ಞೆ ಪಡೆದಿರುತ್ತಾರೆ. ಫಿರ್ಯಾದುದಾರರ ಗಂಡ ಶ್ರೀ ವಿಜನ ಫಿಲಿಪ್ ಹಾಗೂ ಮತ್ತೊಬ್ಬರು ಎಂದರೆ ಶ್ರೀ ಆರ್.ಡಿ. ಜೈವಂತ್ ಅವರು ಅದೇ ಡಿಕ್ರಿಯ ವಿರುದ್ಧ ಮೇಲ್ಮನವಿ ಅಂದರೆ ಆರ್.ಎ.64/2010 ಮಾಡಿ ಪ್ರಶ್ನಿಸಿ ತಡೆಯಾಜ್ಞೆ ಪಡೆದಿದ್ದು, ಸದರಿ ಮೂಲ ದಾವೆಯಲ್ಲಿ ಡಿಕ್ರಿಯಾದರೂ, ಅಂತಿಮ ಡಿಕ್ರಿ

ನಡವಳಿಕೆ ಆಗದೆ ಹಾಗೂ ಆರ್.ಎ.6/2010 ಮತ್ತು ಆರ್.ಎ.64/2010ಗಳಲ್ಲಿ ಆ ಡಿಕ್ರಿಯ ವಿರುದ್ಧ ಮಾಡಿದ ಮೇಲ್ಮನವಿಗಳಲ್ಲಿ ಆ ಡಿಕ್ರಿ ಜಾರಿಯಾಗದಂತೆ ತಡೆ ಆದೇಶಗಳಿದ್ದರೂ ಮತ್ತು ನ್ಯಾಯಾಲಯದ ಯಾವುದೇ ಆದೇಶ ಸದರಿ ಆಸ್ತಿಯ ಹಕ್ಕು ಬದಲಾವಣೆಯಾಗಿರದಿದ್ದರೂ ಮತ್ತು ಹಾಗೆ ಮಾಡಲು ಬರದೇ ಇರುವಾಗಲು ಹಾಗೂ ತಹಶೀಲ್ದಾರ್ ಕಛೇರಿಯಲ್ಲಿ ಆ ಜಮೀನಿನ ಹಕ್ಕು ಬದಲಾವಣೆ ನಡವಳಿಕೆಯನ್ನು ಮುಂದುವರೆಸದಂತೆ ಅರ್ಜಿ ಮಾಡಿ ಕೇಳಿಕೊಂಡಿದ್ದರೂ, ದುರುದ್ದೇಶಪೂರ್ವಕ ದುರ್ನಡತೆ ಎಸಗಿರುವ ಬಗ್ಗೆ ಶ್ರೀಮತಿ ಸಂದರಮ್ಮ ಗಂಡ ಲೇಟ್ ವಿಜಯ್ ಫಿಲಿಪ್ ಅವರು ಲೋಕಾಯುಕ್ತರಿಗೆ ದೂರು ಸಲ್ಲಿಸಿರುತ್ತಾರೆ.

ತಹಶೀಲ್ದಾರ್ ಅವರ ವಿರುದ್ಧ ಮಾಡಲಾದ ಆಪಾದನೆ ಬಗ್ಗೆ ಹೇಳಿಕೆ ಕೊಡಲು, ಪತ್ರ ಹಾಗೂ ನೆನಪೋಲೆ ಕಳುಹಿಸಿದರೂ, ಅವಕಾಶ ಕೊಟ್ಟರೂ ಅವರು ಅದಕ್ಕೆ ಸ್ಪಂದಿಸದೇ, ಯಾವುದೇ ರೀತಿಯ ಉತ್ತರ ಅಥವಾ ಸಮಜಾಯಿಷಿ ಕೊಡಲು ಮುಂದೆ ಬಂದಿಲ್ಲವಾದ್ದರಿಂದ, ಕಡತದಲ್ಲಿರುವ ಕಾಗದ ಪತ್ರಗಳಿಂದ ವ್ಯಕ್ತವಾಗುವ ಸಂಗತಿಗಳೂ, ಮಾಹಿತಿ, ದಾಖಲಾತಿ ಹಾಗೂ ಆಧಾರಗಳಿಂದ ತಹಶೀಲ್ದಾರ್ ಅವರು ಸಾರ್ವಜನಿಕ ಸೇವಕರಾಗಿದ್ದು ಕೊಂಡಾಗ ತಮ್ಮ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿ ನಡೆದುಕೊಂಡಿರುವುದು ವೇದ್ಯವಾಗಿರುವುದಾಗಿ ಲೋಕಾಯುಕ್ತರು ತಿಳಿಸಿರುತ್ತಾರೆ. ಆರೋಪಿತ ಅಧಿಕಾರಿ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕಡೆ ಹಾಗೂ ಕರ್ತವ್ಯ ನಿಷ್ಠೆ ತೋರಿಸದೆ, ಸಾರ್ವಜನಿಕ ಸೇವಕರಿ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಈ ರೀತಿ ಕರ್ತವ್ಯ ಚ್ಯುತಿ ಎಸಗಿರುವ ಸದರಿ ಅಧಿಕಾರಿಯ ವಿರುದ್ಧ ಶಿಸ್ತು ಕ್ರಮ ಜರುಗಿಸಲು, ಕರ್ನಾಟಕ ಲೋಕಾಯಕ್ತ ಕಾಯ್ದೆ ಅಧಿನಿಯಮ 12(3)ರನ್ವಯ ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಇಂತಹ ಕ್ರಮವನ್ನು ಕೈಗೊಂಡ ಬಗ್ಗೆ ಸದರಿ ಕಾಯ್ದೆಯ 12(4) ರನ್ವಯ ಒಂದು ತಿಂಗಳೊಳಗೆ ಮಾನ್ಯ ಲೋಕಾಯುಕ್ತರವರಿಗೆ ಮಾಹಿತಿ ನೀಡುವಂತೆ ಕೋರಿ ಹಾಗೂ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವೆ ನಿಯಮಾವಳಿಗಳ ನಿಯಮ 14(ಎ)ರಡಿಯಲ್ಲಿ ವಿಚಾರಣೆಯನ್ನು ಉಪಲೋಕಾಯುಕ್ತರಿಗೆ ವಹಿಸಲು ಹಾಗೂ ಅರೋಪಿತ ಅಧಿಕಾರಿ ಈಗಾಗಲೇ ಸೇವೆಯಿಂದ ನಿವೃತ್ತರಾಗಿರುವುದರಿಂದ, ಅವರ ವಿರುದ್ಧ ಇಲಾಖಾ ವಿಚಾರಣೆ ಹೂಡಲು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(2)(ಬಿ)(i) ರಡಿ ಮಂಜೂರಾತಿಗೂ ಸಹ ಕೋರಿರುವರು.

ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಸರ್ಕಾರವು ಈ ಪ್ರಕರಣದಲ್ಲಿ ಆರೋಪಿತರೆಂದು ಹೇಳಲಾಗಿರುವ ಶ್ರೀ ಜಗನ್ನಾಥ್ ಶಿರ್ಸೆ, ಹಿಂದಿನ ತಹಶೀಲ್ದಾರ್, ಬೀದರ್ (ಪ್ರಸ್ತುತ ನಿವೃತ್ತರಾಗಿರುವ) ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11(ಎ)ರನ್ವಯ ವಿಚಾರಣೆ ನಡೆಸಲು ಹಾಗೂ ಸದರಿ ನಿಯಮಾವಳಿಗಳ ನಿಯಮ 14(ಎ)ರಡಿಯಲ್ಲಿ ಪ್ರಸ್ತುತ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು, ಬೆಂಗಳೂರು ಇವರಿಗೆ ವಹಿಸಲು ಮತ್ತು ಅರೋಪಿತ ಅಧಿಕಾರಿ ಈಗಾಗಲೇ ಸೇವೆಯಿಂದ ನಿವೃತ್ತರಾಗಿರುವುದರಿಂದ, ಅವರ ವಿರುದ್ಧ ಇಲಾಖಾ ವಿಚಾರಣೆ ಹೂಡಲು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(2)(ಬಿ)(i) ರಡಿ ಮಂಜೂರಾತಿಗೆ ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಕಂಇ 37 ಎಡಿಇ 2012, ಬೆಂಗಳೂರು, ದಿನಾಂಕ: 01-06-2012.

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದ ಸರ್ಕಾರವು ಶ್ರೀ ಜಗನ್ನಾಥ್ ಶಿರ್ಸೆ, ಹಿಂದಿನ ತಹಶೀಲ್ದಾರ್, ಬೀದರ್ (ಪ್ರಸ್ತುತ ನಿವೃತ್ತರಾಗಿರುವ) ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11(ಎ)ರನ್ವಯ ವಿಚಾರಣೆ ನಡೆಸಲು ಹಾಗೂ ಸದರಿ ನಿಯಮಾವಳಿಗಳ ನಿಯಮ 14(ಎ)ರಡಿಯಲ್ಲಿ ವಿಚಾರಣೆ ಜರುಗಿಸಿ, ಸರ್ಕಾರಕ್ಕೆ ವರದಿ ನೀಡಲು ಮಾನ್ಯ ಉಪಲೋಕಾಯುಕ್ತರು, ಬೆಂಗಳೂರು ಇವರಿಗೆ ವಹಿಸಲು ಮತ್ತು ಅರೋಪಿತ ಅಧಿಕಾರಿ ಈಗಾಗಲೇ ಸೇವೆಯಿಂದ ನಿವೃತ್ತರಾಗಿರುವುದರಿಂದ, ಅವರ ವಿರುದ್ಧ ಇಲಾಖಾ ವಿಚಾರಣೆ ಹೂಡಲು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(2)(ಬಿ)(i) ರಡಿ ಮಂಜೂರಾತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ.ರಾಮಲಿಂಗಯ್ಯ

ಪಿ.ಆರ್. 1824

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ: ಶ್ರೀ ಹೆಚ್. ಎಸ್. ಭಲವಾದಿ, ನಿವೃತ್ತ ತಹಶೀಲ್ದಾರ್ ಅವರಿಗೆ ವಿಳಂಬವಾಗಿ ಪಾವತಿಸಲ್ಪಟ್ಟ ನಿವೃತ್ತಿ ಸೌಲಭ್ಯಗಳಿಗೆ ಬಡ್ಡಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1. ಶ್ರೀ ಹೆಚ್.ಎಸ್. ಭಲವಾದಿ, ನಿವೃತ್ತ ತಹಶೀಲ್ದಾರ್ ಅವರ ಮನವಿ ದಿನಾಂಕ: 13-04-2006, 24-4-2006, 05-05-2006 .

2. ಮಹಾಲೇಖಪಾಲರ ಪತ್ರ ಸಂ: GE 1/R-1/Vol.415-52/1061 ದಿನಾಂಕ: 31-10-2008 ಹಾಗೂ 11-09-2009.

ಪ್ರಸ್ತಾವನೆ:

ಶ್ರೀ ಹೆಚ್.ಎಸ್. ಛಲವಾದಿ, ನಿವೃತ್ತ ತಹಶೀಲ್ದಾರ್ ಅವರು ಮೇಲೆ ಓದಲಾದ ಕ್ರ.ಸಂ.(1)ರ ಪತ್ರಗಳಲ್ಲಿ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿ, ತಾವು ದಿನಾಂಕ: 31–05–1996ರಂದು ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ್ದು, ತಮಗೆ ವಿಳಂಬವಾಗಿ ಪಾವತಿಸಲ್ಪಟ್ಟ ನಿವೃತ್ತಿ ಸೌಲಭ್ಯಗಳಿಗೆ ಬಡ್ಡಿಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಸದರಿಯವರಿಗೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಿರುವ ಬಗ್ಗೆ ಕ್ರ.ಸಂ.(2)ರಲ್ಲಿ ಓದಲಾದ ಪತ್ರದಲ್ಲಿ ಮಹಾಲೇಖಪಾಲರು ಮಾಹಿತಿಯನ್ನು ನೀಡಿರುತ್ತಾರೆ.

ಈ ಪ್ರಸ್ತಾವನೆಯನ್ನು ಸರ್ಕಾರದ ಆದೇಶ ಸಂ: ಆಇ (ವಿಶೇಷ) 04 ಪಿಇಎನ್–1 2012, ದಿನಾಂಕ: 04–06–2012ರನ್ವಯ ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಹೆಚ್.ಎಸ್. ಛಲವಾದಿ, ನಿವೃತ್ತ ತಹಶೀಲ್ದಾರ್ ಇವರಿಗೆ ವಿಳಂಬವಾಗಿ ಪಾವತಿಸಲ್ಪಟ್ಟ ನಿವೃತ್ತಿ ಸೌಲಭ್ಯಗಳಿಗೆ ಬಡ್ಡಿ ನೀಡುವ ಬಗ್ಗೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಕಂಇ 539 ಎಎಸ್‌ಡಿ 2008, ಬೆಂಗಳೂರು, ದಿನಾಂಕ:21–06–2012.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಶ್ರೀ ಹೆಚ್.ಎಸ್. ಛಲವಾದಿ, ನಿವೃತ್ತ ತಹಶೀಲ್ದಾರ್ ಇವರಿಗೆ ವಿಳಂಬವಾಗಿ ಪಾವತಿಸಲ್ಪಟ್ಟ ನಿವೃತ್ತಿ ಸೌಲಭ್ಯಗಳಿಗೆ ಈ ಕೆಳಕಂಡಂತೆ ಬಡ್ಡಿಯನ್ನು ಮಂಜೂರು ಮಾಡಿದೆ.

ಡಿ.ಸಿ.ಆರ್.ಜಿ.ಮೊತ್ತ

ರೂ.83,861–00 ಗಳಿಗೆ – ದಿನಾಂಕ: 01–12–2004 ರಿಂದ 30–04–2006ರವರೆಗೆ ರೂ.9,504.00

ಗಳಿಕೆ ರಜೆ ನಗದೀಕರಣ ಮೊತ್ತ

ರೂ.50,936–00 ಗಳಿಗೆ – ದಿನಾಂಕ: 01–12–2004 ರಿಂದ 31–08–2005ರವರೆಗೆ ರೂ.3,056.00

(ಒಟ್ಟು ಹನ್ನೆರಡು ಸಾವಿರದ ಐನೂರು ಅರವತ್ತು ರೂಪಾಯಿಗಳು ಮಾತ್ರ

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂ: ಆಇ (ವಿ) 04 ಪಿಇಎನ್–1/2012, ದಿನಾಂಕ:04–06–2012 ಮತ್ತು ಕಂದಾಯ ಇಲಾಖೆಯ ಅಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಕಂಇ 35117 ಆಂಆಸ 2012 ದಿನಾಂಕ:14–06–2012ರ ಸಹಮತದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ.ರಾಮಲಿಂಗಯ್ಯ

ಪಿ.ಆರ್. 1826

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು–3)

FOREST, ENVIRONMENT & ECOLOGY SECRETARIAT

No: FEE 03 FAF 2009 Bangalore, dated: 08 -08-2012.

CIRCULAR

Sub : Felling of naturally grown trees in private forest lands – reg.

In exercise of the powers vested in the Government under the provisions of Sec.27 of the Karnataka Preservation of Trees Act, 1976, the Government of Karnataka hereby issues the following general directions to all Tree Authorities, Tree Officers and all other officers subordinate to them, with respect to according of permission under the said Act for the felling of naturally grown trees in private forest lands.

2. The Forest (Conservation) Act, 1980, provides in Sec.2 thereof that notwithstanding anything contained in any other law for the time being in force in the State, no State Government or other Authority shall make, except, with the prior approval of the Central Government, any order directing, inter-alia, that any forest land or any portion thereof may be cleared of trees which have grown naturally in that land or portion for the purpose of using it for re-afforestation (Sec.2(iv)). A similar prohibition has also been

laid down regarding use of any forest land or any portion thereof, for any non-forest purpose (Sec.2(ii)). Explanation below the said section has defined the meaning "non forest purpose".

3. The Forest (Conservation) Act, 1980, being a Central Act on a subject in the Concurrent List that has been enacted subsequent to the Karnataka Preservation of Trees Act, 1976, will over-ride the provisions of the said Karnataka Preservation of Trees Act, 1976.

4. The Hon'ble Supreme Court of India, in the judgment in T.N. Godavarman Thirumalpad Vs. Union of India (WP (C) No.202/95 with WP (C) No.171/95, decided on 12.12.1996) has defined the word "Forest" as included in the Forest (Conservation) Act, 1980 as follows :

The word "forest" must be understood according to its dictionary meaning. This description covers all statutorily 'recognised forests, whether designated as reserved, protected or otherwise for the purpose of section 2(1) of the Forest (Conservation) Act. The term 'forest land', occurring in section 2, will not only include "Forest" as understood in the dictionary sense, but also any area recorded as forest in the Government record irrespective of the ownership. This is how it has to be understood for the purpose of section 2 of the Act. The provisions enacted in the Forest (Conservation) Act, 1980 for the conservation of forests and the matters connected therewith must apply clearly to all forests so understood irrespective of the ownership or classification thereof.

5. All Tree Authorities, Tree Officers and all other Officers under the Karnataka Preservation of Trees Act, 1976, are hereby directed that, in respect of private forest lands falling within the purview of Forest (Conservation) Act, 1980, as explained by the Supreme Court in its judgment quoted above, the restrictions stipulated in Sec.2 of the Forest (Conservation) Act, 1980 will apply and will have to be strictly followed, irrespective of any other provisions to the contrary under the Karnataka Preservation of Trees Act, 1976. It is hereby clarified that this direction will over-ride all other directions / instructions issued earlier.

M. Nagaraja Hampole
Secretary to Government (Forests)
Forest, Environment & Ecology Department.

PR - 1832

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರ ಕಲಂ 38–X ರನ್ವಯ ಹುಲಿ ಸಂರಕ್ಷಣಾ ಪ್ರತಿಷ್ಠಾನ ಆಡಳಿತ ಮಂಡಳಿಯ ಸದಸ್ಯರನ್ನು ಮತ್ತು ಆಯಾ ಹುಲಿ ಸಂರಕ್ಷಣಾ ಪ್ರತಿಷ್ಠಾನ ಕಾರ್ಯಕಾರಿ ಸಮಿತಿಗೆ ಸದಸ್ಯರುಗಳನ್ನು ನೇಮಿಸಿ ಪುನರ್ ರಚಿಸುವ ಬಗ್ಗೆ.

ಓದಲಾಗಿದೆ:

1) ಪರಿಸರ ಮತ್ತು ಅರಣ್ಯ ಸಚಿವಾಲಯ, ಭಾರತ ಸರ್ಕಾರ ಇವರ ದಿನಾಂಕ: 22–06–2007ರ ಅಧಿಸೂಚನೆ.
2) ಸರ್ಕಾರದ ಆದೇಶ ಸಂಖ್ಯೆ: ಅಪಜೀ 104 ಎಫ್‌ಡಬ್ಲ್ಯೂಎಲ್ 2007, ದಿನಾಂಕ: 13–12–2007.
3) ಸರ್ಕಾರದ ಆದೇಶ ಸಂಖ್ಯೆ: ಅಪಜೀ 104 ಎಫ್‌ಡಬ್ಲ್ಯೂಎಲ್ 2007 (ಭಾಗ–1), ದಿನಾಂಕ: 02–03–2009.
4) ಸರ್ಕಾರದ ಆದೇಶ ಸಂಖ್ಯೆ: ಅಪಜೀ 104 ಎಫ್‌ಡಬ್ಲ್ಯೂಎಲ್ 2007, ದಿನಾಂಕ: 05–01–2012.
5) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)ರವರ ಪತ್ರ ಸಂಖ್ಯೆ: ಬಿ2/ವಜೀ/ಸಿಆರ್–05–2011–12, ದಿನಾಂಕ: 09–04–2012.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 22–06–2007ರ ಅಧಿಸೂಚನೆಯಲ್ಲಿ ಕೇಂದ್ರ ಸರ್ಕಾರವು ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರ ಸೆಕ್ಷನ್ 38–Xರ ಪ್ರಕಾರ ರಾಜ್ಯದಲ್ಲಿ ಹುಲಿ ಸಂರಕ್ಷಣಾ ಪ್ರತಿಷ್ಠಾನಗಳನ್ನು ಸ್ಥಾಪಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ.

2. ಮೇಲೆ (2)ರಲ್ಲಿ ಓದಲಾದ ದಿನಾಂಕ: 13–12–2007ರ ಆದೇಶದಲ್ಲಿ ರಾಜ್ಯದಲ್ಲಿ ಇರುವ ಹುಲಿ ಸಂರಕ್ಷಣಾ ಪ್ರತಿಷ್ಠಾನಗಳಿಗೆ ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿಗಳನ್ನು ರಚಿಸಲಾಗಿದೆ.

3. ಮೇಲೆ (3)ರಲ್ಲಿ ಓದಲಾದ ದಿನಾಂಕ: 02–03–2009ರ ಆದೇಶದಲ್ಲಿ ರಾಜ್ಯದಲ್ಲಿನ ಬಂಡೀಪುರ – ನಾಗರಹೊಳೆ ಹುಲಿ ಸಂರಕ್ಷಣಾ ಪ್ರತಿಷ್ಠಾನ, ಭದ್ರಾ ಹುಲಿ ಸಂರಕ್ಷಣಾ ಪ್ರತಿಷ್ಠಾನ ಮತ್ತು ಅಣಶಿ – ದಾಂಡೇಲಿ ಹುಲಿ ಸಂರಕ್ಷಣಾ ಪ್ರತಿಷ್ಠಾನಗಳ ಆಡಳಿತ ಮಂಡಳಿಗೆ ಹಾಗೂ ಕಾರ್ಯಕಾರಿ ಸಮಿತಿಗಳಿಗೆ ಸದಸ್ಯರುಗಳನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

4. ಮೇಲೆ (4)ರಲ್ಲಿ ಓದಲಾದ ದಿನಾಂಕ: 05–01–2012ರ ಆದೇಶದಲ್ಲಿ ಬಿಳಿಗಿರಿ ರಂಗನಾಥ ಸ್ವಾಮಿ ದೇವಸ್ಥಾನದ ಹುಲಿ ಸಂರಕ್ಷಣಾ ಪ್ರತಿಷ್ಠಾನವನ್ನು ಹಾಗೂ ಸದರಿ ಪ್ರತಿಷ್ಠಾನಕ್ಕೆ ಸದಸ್ಯರುಗಳನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

5. ಮೇಲೆ (5)ರಲ್ಲಿ ಓದಲಾದ ದಿನಾಂಕ: 09–04–2012ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)ರವರು ಮೇಲ್ಕಂಡ ಆದೇಶಗಳಲ್ಲಿ ಹೊರಡಿಸಿರುವ ಹುಲಿ ಸಂರಕ್ಷಣಾ ಪ್ರತಿಷ್ಠಾನಗಳಿಗೆ ಆಡಳಿತ ಮಂಡಳಿ ಮತ್ತು ಆಯಾ ಹುಲಿ ಸಂರಕ್ಷಣಾ ಪ್ರತಿಷ್ಠಾನಗಳ ಕಾರ್ಯಕಾರಿ ಸಮಿತಿಗಳಿಗೆ ನೇಮಕಗೊಂಡ ಸದಸ್ಯರುಗಳ ಕಾಲಾವಧಿ ದಿನಾಂಕ: 02–03–2012ಕ್ಕೆ ಮುಗಿದಿರುವುದರಿಂದ ಸದರಿ ಹುಲಿ ಸಂರಕ್ಷಣಾ ಪ್ರತಿಷ್ಠಾನದ ಆಡಳಿತ ಮಂಡಳಿಗೆ ಹಾಗೂ ಕಾರ್ಯಕಾರಿ ಸಮಿತಿಗಳಿಗೆ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರ ಸೆಕ್ಷನ್ 38–Xರನ್ವಯ ಸದಸ್ಯರುಗಳನ್ನು ನೇಮಕ ಮಾಡಿ ಆದೇಶ ಹೊರಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

6. ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಆದ್ದರಿಂದ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 146 ಎಫ್‌ಡಬ್ಲ್ಯುಎಲ್ 2012 ಬೆಂಗಳೂರು, ದಿನಾಂಕ: 19–06–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರ ಸೆಕ್ಷನ್ 38–Xರನ್ವಯ ರಾಜ್ಯದಲ್ಲಿರುವ ಬಂಡೀಪುರ – ನಾಗರಹೊಳೆ ಹುಲಿ ಸಂರಕ್ಷಣಾ ಪ್ರತಿಷ್ಠಾನ, ಭದ್ರಾ ಹುಲಿ ಸಂರಕ್ಷಣಾ ಪ್ರತಿಷ್ಠಾನ, ಅಣಶಿ – ದಾಂಡೇಲಿ ಹುಲಿ ಸಂರಕ್ಷಣಾ ಪ್ರತಿಷ್ಠಾನ ಮತ್ತು ಬಿ.ಆರ್.ಟಿ. ಹುಲಿ ಸಂರಕ್ಷಣಾ ಪ್ರತಿಷ್ಠಾನಗಳ ಆಡಳಿತ ಮಂಡಳಿಗೆ ಹಾಗೂ ಕಾರ್ಯಕಾರಿ ಸಮಿತಿಗಳಿಗೆ ಈ ಕೂಡಲೇ ಹಾಗೂ ಮುಂದಿನ ಆದೇಶದ ವರೆಗೆ ಸದಸ್ಯರುಗಳನ್ನು ಈ ಕೆಳಕಂಡಂತೆ ನೇಮಕ ಮಾಡಲಾಗಿದೆ.

ಹುಲಿ ಸಂರಕ್ಷಣಾ ಪ್ರತಿಷ್ಠಾನ ಆಡಳಿತ ಮಂಡಳಿ:

1.	ಮಾನ್ಯ ಅರಣ್ಯ ಸಚಿವರು,	ಅಧ್ಯಕ್ಷರು
2.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.	ಉಪಾಧ್ಯಕ್ಷರು
3.	ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು.	ಸದಸ್ಯರು
4.	ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಹುಲಿ ಯೋಜನೆ), ಮೈಸೂರು.	ಸದಸ್ಯರು
5.	ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು.	ಸದಸ್ಯರು
6.	ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ, ಶಿರಸಿ.	ಸದಸ್ಯರು
7.	ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ರಾಜೀವ್‌ಗಾಂಧಿ (ನಾಗರಹೊಳೆ) ರಾಷ್ಟ್ರೀಯ ಉದ್ಯಾನವನ, ಹುಣಸೂರು.	ಸದಸ್ಯರು
8.	ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ.	ಸದಸ್ಯರು
9.	ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಭದ್ರಾ, ಚಿಕ್ಕಮಗಳೂರು.	ಸದಸ್ಯರು
10	ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ದಾಂಡೇಲಿ.	ಸದಸ್ಯರು
11.	ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಬಿಳಿಗಿರಿರಂಗನ ಬೆಟ್ಟ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ.	ಸದಸ್ಯರು

12.	ಡಾ: ಕೆ. ಉಲ್ಲಾಸ್ ಕಾರಂತ್.	ಸದಸ್ಯರು
13.	ಡಾ: ವಿ.ಜೆ.ಓ. ಜಾನ್‌ಸಿಂಗ್.	ಸದಸ್ಯರು
14.	ವಿಧಾನಸಭಾ ಸದಸ್ಯರು, ವೀರಾಜಪೇಟೆ.	ಸದಸ್ಯರು
15.	ವಿಧಾನ ಸಭಾ ಸದಸ್ಯರು, ಗೋಕಾಕ್.	ಸದಸ್ಯರು
16.	ಶ್ರೀ ಮಹಮದ್ ಫಜುಲ್ಲಾ, ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಹೆಗೋಡು ಜಿಲ್ಲಾ ಪಂಚಾಯತ್ ಚುನಾವಣೆ ಕ್ಷೇತ್ರ, ಮೈಸೂರು ಜಿಲ್ಲೆ.	ಸದಸ್ಯರು
17.	ಶ್ರೀ ಜೆ.ಖಿ. ಲೋಕೇಶ್, ಜಾಗರ ಕ್ಷೇತ್ರದ ಜಿಲ್ಲಾ ಪಂಚಾಯತ್ ಸದಸ್ಯರು, ಕಲ್ಲೆದೇವರ ಹಳ್ಳಿ, ಕೈಮರ ಪೋಸ್ಟ್, ಚಿಕ್ಕಮಗಳೂರು ತಾಲ್ಲೂಕು.	ಸದಸ್ಯರು
18.	ಶ್ರೀಮತಿ ಸುಬಾಗ್ಗಿ ಸುಭಾಷ್ ಗೌಡ, ಜಿಲ್ಲಾ ಪಂಚಾಯತ್ ಸದಸ್ಯರು, ಕುಂಬಾರವಾಡ.	ಸದಸ್ಯರು
19.	ಶ್ರೀಮತಿ ರಾಜೇಶ್ವರಿ, ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಬರ್ಗಿ ಚಾಮರಾಜನಗರ ಜಿಲ್ಲೆ.	ಸದಸ್ಯರು
20.	ಶ್ರೀ ಸಿ.ಎಂ. ಅಚ್ಚಪ್ಪ, ಅಧ್ಯಕ್ಷರು, ಸುಳೆಗೋಡು, ಪರಿಸರ ಅಭಿವೃದ್ಧಿ ಸಮಿತಿ, ವಿರಾಜಪೇಟೆ ತಾಲ್ಲೂಕು, ನಾಗರಹೊಳೆ ಸಂರಕ್ಷಿತ ಪ್ರದೇಶ.	ಸದಸ್ಯರು
21.	ಶ್ರೀಮತಿ. ಮಹೇಶ್ವರಿ, ಲೋಕೇಶ್ ರವರ ಪತ್ನಿ, ಮಂಡಳ್ಳಿ ಪರಿಸರ ಅಭಿವೃದ್ಧಿ ಸಮಿತಿ, ಗುಂಡ್ಲುಪೇಟೆ ತಾಲ್ಲೂಕು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ.	ಸದಸ್ಯರು
22.	ಶ್ರೀ ಗೋಪಾಲ್ ಭಟ್, ಮಾರ್ಕಂಡೇಶ್ವರ ಪರಿಸರ ಅಭಿವೃದ್ಧಿ ಸಮಿತಿ, ಕಾನೊಲ್ಯ, ಸಂಗಮೇಶ್ವರ ಪೇಟೆ, ಚಿಕ್ಕಮಗಳೂರು.	ಸದಸ್ಯರು
23.	ಶ್ರೀ ಹೇಮಾಲ ನಾಯಕ್, ಅಧ್ಯಕ್ಷರು, ಕಲ್ಪತರು ಪರಿಸರ ಅಭಿವೃದ್ಧಿ ಸಮಿತಿ, ತಣಿಗೆಬೈಲು ವನ್ಯಜೀವಿ ವಲಯ, ಚಿಕ್ಕಮಗಳೂರು.	ಸದಸ್ಯರು
24.	ಶ್ರೀಮತಿ. ಸಂಧ್ಯ ಪಿ. ದೇಸಾಯ್, ಪರಿಸರ ಅಭಿವೃದ್ಧಿ ಸಮಿತಿ, ಕಲಸಾಯಿ, ಕಂಬಾರವಾಡ ವನ್ಯಜೀವಿ ವಲಯ.	ಸದಸ್ಯರು
25.	ಶ್ರೀ ನಂದು ಎಲ್.ತೆಲಿ. ಫನ್‌ಸೋಲಿ ಪರಿಸರ ಅಭಿವೃದ್ಧಿ ಸಮಿತಿ, ಫನ್‌ಸೋಲಿ ವನ್ಯಜೀವಿ ವಲಯ.	ಸದಸ್ಯರು
26.	ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಬೆಂಗಳೂರು.	ಸದಸ್ಯ ಕಾರ್ಯದರ್ಶಿ

1. ನಾಮನಿರ್ದೇಶಿತ ಸದಸ್ಯರ ಪದಾವಧಿಯು ನಾಮನಿರ್ದೇಶನ ದಿನಾಂಕದಿಂದ ಮೂರು ವರ್ಷಗಳ ಅವಧಿಯದಾಗಿರತಕ್ಕದ್ದು.

2. ಆಡಳಿತ ಮಂಡಳಿಯ ಸದಸ್ಯನು, ವಿಧಾನ ಸಭೆ ಸದಸ್ಯ ಅಥವಾ ಸಂದರ್ಭಾನುಸಾರ ಜಿಲ್ಲಾ ಪಂಚಾಯತ್ ಸದಸ್ಯನಾಗಿರುವುದು ನಿಂತು ಹೋದ ಮೇಲೆ ಆಡಳಿತ ಮಂಡಳಿಯ ಸದಸ್ಯನಾಗಿರುವುದು ನಿಂತು ಹೋಗುತ್ತದೆ.

ರಾಜ್ಯದಲ್ಲಿ ನಾಲ್ಕು ಹುಲಿ ಸಂರಕ್ಷಣಾ ಪ್ರತಿಷ್ಠಾನಗಳಿದ್ದು, ಅವು ಈ ಕೆಳಗಿನಂತಿರುತ್ತವೆ.

1. ಬಂಡೀಪುರ – ನಾಗರಹೊಳೆ ಹುಲಿ ಸಂರಕ್ಷಣಾ ಪ್ರತಿಷ್ಠಾನ, ಬಂಡೀಪುರ.
2. ಭದ್ರಾ ಹುಲಿ ಸಂರಕ್ಷಣಾ ಪ್ರತಿಷ್ಠಾನ – ಚಿಕ್ಕಮಗಳೂರು.
3. ಅಣಶಿ – ದಾಂಡೇಲಿ ಹುಲಿ ಸಂರಕ್ಷಣಾ ಪ್ರತಿಷ್ಠಾನ – ದಾಂಡೇಲಿ.
4. ಬಿಳಿಗಿರಿ ರಂಗನಾಥ ಸ್ವಾಮಿ, ಹುಲಿ ಸಂರಕ್ಷಣಾ ಪ್ರತಿಷ್ಠಾನ – ಚಾಮರಾಜನಗರ.

ಪ್ರತಿಯೊಂದು ಹುಲಿ ಸಂರಕ್ಷಣಾ ಪ್ರತಿಷ್ಠಾನವು ತನ್ನ ದೈನಂದಿನ ನಿರ್ವಹಣೆಯನ್ನು ನೋಡಿಕೊಳ್ಳಲು ಒಂದು ಕಾರ್ಯಕಾರಿ ಸಮಿತಿಯನ್ನು ಹೊಂದಿರಬೇಕಾಗಿದ್ದು, ಸದರಿ ಕಾರ್ಯಕಾರಿ ಸಮಿತಿಯು ಪ್ರತಿಷ್ಠಾನದ ನಿಯಮಗಳಿಗೆ ಒಳಪಟ್ಟು ಪ್ರತಿಷ್ಠಾನದ ವ್ಯವಹಾರಗಳನ್ನು ನೋಡಿಕೊಳ್ಳಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಾರ್ಯಕಾರಿ ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಗಿದೆ.

1. ಬಂಡೀಪುರ–ನಾಗರಹೊಳೆ ಹುಲಿ ಸಂರಕ್ಷಣಾ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ:

1.	ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಹುಲಿ ಯೋಜನೆ), ಮೈಸೂರು.	ಅಧ್ಯಕ್ಷರು
2.	ಅರಣ್ಯ ಸಂರಕ್ಷಣಾಧಿಕಾರಿ, ರಾಜೀವ್‌ಗಾಂಧಿ (ನಾಗರಹೊಳೆ) ರಾಷ್ಟ್ರೀಯ ಉದ್ಯಾನವನ, ಹುಣಸೂರು.	ಸದಸ್ಯ ಕಾರ್ಯದರ್ಶಿ
3.	ವಲಯ ಅರಣ್ಯ ಅಧಿಕಾರಿ, ಹೆಡಿಯಾಲ ವನ್ಯಜೀವಿ ವಲಯ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ.	ಸದಸ್ಯರು
4.	ಶ್ರೀ ಸಿ.ಎಂ. ಅಚ್ಚಪ್ಪ, ಅಧ್ಯಕ್ಷರು, ಸುಳೆಗೋಡು, ಪರಿಸರ ಅಭಿವೃದ್ಧಿ ಸಮಿತಿ, ವೀರಾಜಪೇಟೆ ತಾಲ್ಲೂಕು, ನಾಗರಹೊಳೆ ಸಂರಕ್ಷಿತ ಪ್ರದೇಶ.	ಸದಸ್ಯರು
5.	ಶ್ರೀಮತಿ ಮಹೇಶ್ವರಿ, ಲೋಕೇಶ್ ರವರ ಪತ್ನಿ, ಮಂಡಳ್ಳಿ ಪರಿಸರ ಅಭಿವೃದ್ಧಿ ಸಮಿತಿ, ಗುಂಡ್ಲುಪೇಟೆ ತಾಲ್ಲೂಕು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ.	ಸದಸ್ಯರು
6.	ವನಪಾಲಕ ಮತ್ತು ಕಾರ್ಯದರ್ಶಿ, ಮೇಟಿಕುಪ್ಪೆ ಪರಿಸರ ಅಭಿವೃದ್ಧಿ ಸಮಿತಿ, ನೇರಳೆ ಕುಪ್ಪೆ, ಪರಿಸರ ಅಭಿವೃದ್ಧಿ ಸಮಿತಿ, ಆನೆಚೌಕೂರು ವನ್ಯಜೀವಿ ವಲಯ, ನಾಗರಹೊಳೆ ಸಂರಕ್ಷಿತ ಪ್ರದೇಶ.	ಸದಸ್ಯರು

2. ಭದ್ರಾ ಹುಲಿ ಸಂರಕ್ಷಣಾ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ:

1.	ಕ್ಷೇತ್ರ ನಿರ್ದೇಶಕರು ಮತ್ತು ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು.	ಅಧ್ಯಕ್ಷರು
2.	ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾ ವನ್ಯಜೀವಿ ವಿಭಾಗ, ಚಿಕ್ಕಮಗಳೂರು.	ಸದಸ್ಯ ಕಾರ್ಯದರ್ಶಿ
3.	ಶ್ರೀ ಗೋಪಾಲ್ ಭಟ್, ಮಾರ್ಕಂಡೇಶ್ವರ ಪರಿಸರ ಅಭಿವೃದ್ಧಿ ಸಮಿತಿ, ಕಾನೊಲ್ಯ, ಸಂಗಮೇಶ್ವರಪೇಟೆ, ಚಿಕ್ಕಮಗಳೂರು.	ಸದಸ್ಯರು
4.	ಶ್ರೀ ಹೇಮಾಲ ನಾಯಕ್, ಅಧ್ಯಕ್ಷರು, ಕಲ್ಪತರು ಪರಿಸರ ಅಭಿವೃದ್ಧಿ ಸಮಿತಿ, ತಣಿಗೆಬೈಲು ವನ್ಯಜೀವಿ ವಲಯ, ಚಿಕ್ಕಮಗಳೂರು.	ಸದಸ್ಯರು
5.	ವಲಯ ಅರಣ್ಯ ಅಧಿಕಾರಿ, ಮುತ್ತೋಡಿ ವನ್ಯಜೀವಿ ವಲಯ, ಚಿಕ್ಕಮಗಳೂರು ಉಪ ವಿಭಾಗ.	ಸದಸ್ಯರು
6.	ವನಪಾಲಕ, ಜಕ್ಕವಳ್ಳಿ ವನ್ಯಜೀವಿ ವಲಯ.	ಸದಸ್ಯರು

3. ದಾಂಡೇಲಿ–ಅಣಶಿ ಹುಲಿ ಸಂರಕ್ಷಣಾ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ:

1.	ಕ್ಷೇತ್ರ ನಿರ್ದೇಶಕರು ಮತ್ತು ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ, ಶಿರಸಿ.	ಅಧ್ಯಕ್ಷರು
2.	ಉಪ ಅರಣ್ಯ ಸಂರಕ್ಷಣಾಧಿಕಾರಿ, ದಾಂಡೇಲಿ ವನ್ಯಜೀವಿ ವಿಭಾಗ, ದಾಂಡೇಲಿ.	ಸದಸ್ಯ ಕಾರ್ಯದರ್ಶಿ
3.	ಶ್ರೀಮತಿ ಸಂದ್ಯ ಪಿ. ದೇಸಾಯ್, ಪರಿಸರ ಅಭಿವೃದ್ಧಿ ಸಮಿತಿ, ಕಲಸಾಯಿ, ಕುಂಬಾರವಾಡ ವನ್ಯಜೀವಿ ವಲಯ.	ಸದಸ್ಯರು

4.	ಶ್ರೀ ನಂದು ಎಲ್. ತೆಲಿ, ಪಣಸೋಲಿ ಪರಿಸರ ಅಭಿವೃದ್ಧಿ ಸಮಿತಿ, ಪಣಸೋಲಿ ವನ್ಯಜೀವಿ ವಲಯ.	ಸದಸ್ಯರು
5.	ವಲಯ ಅರಣ್ಯ ಅಧಿಕಾರಿ, ಕುಳಗಿ ವನ್ಯಜೀವಿ ವಲಯ.	ಸದಸ್ಯರು
6.	ಶಾಖೆ ವನಪಾಲಕ, ಗುಂದ್ ವನ್ಯಜೀವಿ ವಲಯ.	ಸದಸ್ಯರು

4. ಬಿ.ಆರ್.ಟಿ. ಹುಲಿ ಸಂರಕ್ಷಣಾ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ:

1.	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ್ತ, ಚಾಮರಾಜನಗರ.	ಅಧ್ಯಕ್ಷರು
2.	ಅರಣ್ಯ ಸಂರಕ್ಷಣಾಧಿಕಾರಿ, ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ.	ಸದಸ್ಯ ಕಾರ್ಯದರ್ಶಿ
3.	ಅಧ್ಯಕ್ಷರು, ಪರಿಸರ ಅಭಿವೃದ್ಧಿ ಸಮಿತಿ, ಅರೇಪಾಳ್ಯ, ಕೊಳ್ಳೇಗಾಲ ತಾಲ್ಲೂಕು.	ಸದಸ್ಯರು
4.	ಅಧ್ಯಕ್ಷರು, ಪರಿಸರ ಅಭಿವೃದ್ಧಿ ಸಮಿತಿ, ಕನ್ನಾರೀ ಕಾಲೋನಿ, ಚಾಮರಾಜನಗರ ತಾಲ್ಲೂಕು.	ಸದಸ್ಯರು
5.	ವನಪಾಲಕ ಮತ್ತು ಕಾರ್ಯದರ್ಶಿ, ದೇವರಳ್ಳಿ ಪರಿಸರ ಅಭಿವೃದ್ಧಿ ಸಮಿತಿ, ವನ್ಯಜೀವಿ ವಲಯ, ಯಳಂದೂರು.	ಸದಸ್ಯರು

ಉಪ ಅರಣ್ಯ ಸಂರಕ್ಷಣಾಧಿಕಾರಿ ಅಥವಾ ಸಂದರ್ಭಾನುಸಾರ ಹುಲಿ ಸಂರಕ್ಷಣಾ ಪ್ರದೇಶದ ವಲಯ ಅರಣ್ಯಾಧಿಕಾರಿ ಇವರು ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

ನಾಮನಿರ್ದೇಶನಗೊಂಡ ಸದಸ್ಯರ ಸದಸ್ಯತ್ವದ ಕಾಲಾವಧಿಯು ನಾಮನಿರ್ದೇಶನಗೊಂಡ ದಿನಾಂಕದಿಂದ ಎರಡು ವರ್ಷಗಳ ಅವಧಿಯದಾಗಿರುತ್ತದೆ.

ನಾಮನಿರ್ದೇಶಿತ ಸದಸ್ಯರನ್ನು ಹೊರತುಪಡಿಸಿ ಕಾರ್ಯಕಾರಿ ಸಮಿತಿಯ ಸದಸ್ಯನು ಯಾವ ಹುದ್ದೆಯ ಬಲದಿಂದ ಸಮಿತಿಯ ಸದಸ್ಯನಾಗಿ ಆಯ್ಕೆಗೊಂಡಿರುವನೋ ಆ ಹುದ್ದೆಯಿಂದ ಕೆಳಗಿಳಿದ ಕೂಡಲೇ ಸದರಿ ಕಾರ್ಯಕಾರಿ ಸಮಿತಿಯ ಸದಸ್ಯತ್ವವು ನಿಂತು ಹೋಗತಕ್ಕದ್ದು.

ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಯ ಅಧಿಕಾರ ಹಾಗೂ ಪ್ರಕಾರ್ಯಗಳು ಮತ್ತು ಹುಲಿ ಸಂರಕ್ಷಣಾ ಪ್ರತಿಷ್ಠಾನದ ನಡವಳಿ ಮತ್ತು ನಿಯಮಾವಳಿಗಳು ಮೇಲೆ (1)ರಲ್ಲಿ ಓದಲಾದ ಕೇಂದ್ರ ಸರ್ಕಾರದ ದಿನಾಂಕ: 22–06–2007ರ ಅಧಿಸೂಚನೆಯಲ್ಲಿ ಸೂಚಿಸಿರುವಂತೆಯೇ ಇರುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್. 1834

ಕಂದಾಯ ಸಚಿವಾಲಯ

ವಿಷಯ:– ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಗಿಡದಕೋನೇನಹಳ್ಳಿ ಗ್ರಾಮದ ಸರ್ವೆ ನಂ.38 ರಲ್ಲಿ ಬುದ್ಧ ಎಜುಕೇಷನ್ ಟ್ರಸ್ಟ್ ಮತ್ತು ಸೊಸೈಟಿ ಇವರಿಗೆ ಜಮೀನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:
(1) ಸರ್ಕಾರದ ಪತ್ರ ಸಂ: ಆರ್‌ಡಿ 233 ಎಲ್‌ಜಿಬಿ 2001 ದಿನಾಂಕ: 21–03–2002.
(2) ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 233 ಎಲ್‌ಜಿಬಿ 2001 ದಿನಾಂಕ: 16–07–2002.
(3) ಸರ್ಕಾರದ ಪತ್ರ ಸಂ: ಆರ್‌ಡಿ 203 ಎಲ್‌ಜಿಬಿ 2009 ದಿನಾಂಕ: 23–06–2009.
(4) ದಿನಾಂಕ:14–06–2012 ರಂದು ನಡೆದ ಸಚಿವ ಸಂಪುಟದಲ್ಲಿ ತೆಗೆದುಕೊಂಡ ನಿರ್ಣಯ.

ಪ್ರಸ್ತಾವನೆ:

ಮೇಲೆ(1) ರಲ್ಲಿ ಓದಲಾದ ಪತ್ರದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಗಿಡದಕೋನೇನಹಳ್ಳಿ ಗ್ರಾಮದ ಸ.ನಂ.38 ರಲ್ಲಿ 6–00 ಎಕರೆ ಜಮೀನನ್ನು ಎಕರೆ ಒಂದಕ್ಕೆ ರೂ.2.00 ಲಕ್ಷಗಳ ಮಾರುಕಟ್ಟೆ ಬೆಲೆ ಹಾಗೂ ನಿಯಮಗಳನ್ವಯ ಇತರೆ ಶುಲ್ಕ ವಿಧಿಸಿ ಬುದ್ಧ ಎಜುಕೇಷನ್ ಸೊಸೈಟಿ ಮತ್ತು ಟ್ರಸ್ಟ್ (ರಿ) ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿತ್ತು.

2. ಸದರಿ ಸಂಸ್ಥೆಯು ಸರ್ಕಾರಕ್ಕೆ ಪಾವತಿಸಬೇಕಾಗಿರುವ ಪೂರ್ತಿ ಮೊತ್ತ ಪಾವತಿಸಿದ ಮೇಲೆ ಬುದ್ಧ ಎಜುಕೇಷನ್ ಸೊಸೈಟಿ ಮತ್ತು ಟ್ರಸ್ಟ್(ರಿ) ಇವರಿಗೆ 6.00 ಎಕರೆ ಜಮೀನನ್ನು ಹಸ್ತಾಂತರ ಮಾಡಿ ನಂತರ ಖಾತೆ, ಪಹಣಿ ಮತ್ತು ಮ್ಯುಟೇಷನ್ ದಾಖಲೆ ಮಾಡಿ ಇತರೆ ಶುಲ್ಕಗಳನ್ನು ವಿಧಿಸಲಾಗಿ ಕಾಲೇಜು ಮತ್ತು ಆಸ್ಪತ್ರೆ ಕಟ್ಟಡ ಇವುಗಳ ನಿರ್ಮಾಣಕ್ಕೆ ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿತ್ತು.

3. ಈ ಕುರಿತಂತೆ ಶ್ರೀಮತಿ ಮಾದಮ್ಮ ಮತ್ತು 24 ವ್ಯಕ್ತಿಗಳು, ಶ್ರೀ ರಂಗಸ್ವಾಮಿ ಮತ್ತು ಇತರೆ 24 ವ್ಯಕ್ತಿಗಳು ಹಾಗೂ ಶ್ರೀ ಮಾದಯ್ಯ ಮತ್ತು ಇತರರು ಕ್ರಮವಾಗಿ ರಿಟ್ ಅರ್ಜಿ ಸಂ:7756/2006, ರಿಟ್ ಅರ್ಜಿ ಸಂಖ್ಯೆ:7271/2006 ಹಾಗೂ ರಿಟ್ ಅರ್ಜಿ ಸಂಖ್ಯೆ:9317/2006 ಮತ್ತು 2381/2006ನ್ನು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಗಳನ್ನು ಒಟ್ಟುಗೂಡಿಸಿ ದಿನಾಂಕ:30–05–2008 ರಂದು ತೀರ್ಪು ನೀಡುತ್ತಾ, ಉಲ್ಲೇಖಿತ ರಿಟ್ ಅರ್ಜಿಗಳನ್ನು ವಜಾಮಾಡಿ ಬುದ್ಧ ಎಜುಕೇಷನ್ ಸೊಸೈಟಿ ಮತ್ತು ಟ್ರಸ್ಟ್(ರಿ) ಇವರಿಗೆ ಗಿಡದಕೋನೇನಹಳ್ಳಿ ಗ್ರಾಮದ ಸರ್ವೆ ನಂ.38 ರಲ್ಲಿ 6 ಎಕರೆ ಜಮೀನನ್ನು ಮಂಜೂರು ಮಾಡಿರುವುದನ್ನು ಎತ್ತಿ ಹಿಡಿದಿತ್ತು.

4. ಉಲ್ಲೇಖಿತ ತೀರ್ಪನ್ನು ಪ್ರಶ್ನಿಸುತ್ತಾ, ಶ್ರೀಮತಿ ಮಾದಮ್ಮ ಬಿನ್ ಲೇಟ್ ವೆಂಕಟರಮಣಪ್ಪ ಹಾಗೂ 24 ಇತರೆ ವ್ಯಕ್ತಿಗಳು ರಾಜ್ಯ ಉಚ್ಚ ನ್ಯಾಯಾಲದಲ್ಲಿ ರಿಟ್ ಅಪೀಲು ಸಂಖ್ಯೆ: 997/2008 (ಎಲ್.ಎ.ಬಿ.ಡಿ.ಎ) ರಿಟ್ ಅಪೀಲು ಸಂಖ್ಯೆ: 1022/2008 (ಎಲ್.ಎ.ಬಿ.ಡಿ.ಎ) ಹಾಗೂ ರಿಟ್ ಅಪೀಲು ಸಂಖ್ಯೆ: 1023/2008 (ಎಲ್.ಎ.ಬಿ.ಡಿ.ಎ) ದಾಖಲಿಸಿದ್ದರು.

5. ರಾಜ್ಯದ ಉಚ್ಚ ನ್ಯಾಯಾಲಯವು ಸದರಿ ಅರ್ಜಿಗಳನ್ನು ಇತ್ಯರ್ಥಗೊಳಿಸುತ್ತಾ, ದಿನಾಂಕ: 17–10–2008 ರಂದು ಕೆಳಕಂಡಂತೆ ತೀರ್ಪು ನೀಡಿರುತ್ತದೆ:–

" issue No.III, to what reliefs the parties are entitled to:

(i) In view of the answers to issue Nos.1 and 2 the petitioners are entitled for the respective sites unless and until their possession is resumed by the Government in accordance with the procedure and in the manner known to law.

(ii) The two educational institutions viz., Buddha Education Trust and Basaveshwara Little Flowers Educational Society, have been granted 6-00 acres and 4-00 acres respectively in their favour, even though not entitled for the reasons aforesaid are entitled for alternative land to be allotted by the Government with in a period of three months from the date of receipt of this order without claiming any extra amount.

6. ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಗಿಡದಕೋನೇನಹಳ್ಳಿ ಗ್ರಾಮದ ಸ.ನಂ.38 ರಲ್ಲಿ 6–00 ಎಕರೆ ಜಮೀನನ್ನು ಎಕರೆ ಒಂದಕ್ಕೆ ರೂ.2.00 ಲಕ್ಷಗಳ ಮೊತ್ತದ ಮಾರುಕಟ್ಟೆ ಬೆಲೆ ವಿಧಿಸಿ ಸರ್ಕಾರದ ಪತ್ರ ದಿನಾಂಕ:21–03–2002 ಮತ್ತು 16–07–2002 ರಲ್ಲಿ ನೀಡಲಾದ ಮಂಜೂರಾತಿ ರದ್ದುಪಡಿಸಿ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಅವ್ವೇರಹಳ್ಳಿ ಸ.ನಂ.10 ರಲ್ಲಿ 6–00 ಎಕರೆ ಜಮೀನನ್ನು ಈ ಹಿಂದೆ ನಿಗಧಿಪಡಿಸಿದ ದರದಲ್ಲೇ ಮಂಜೂರು ಮಾಡಲಾಗಿತ್ತು.

7. ಈ ಮಧ್ಯೆ ಬುದ್ಧ ಎಜುಕೇಷನ್ ಸೊಸೈಟಿ ಮತ್ತು ಟ್ರಸ್ಟ್ (ರಿ) ಇವರು ಹಲವಾರು ಮನವಿಗಳನ್ನು ಸಲ್ಲಿಸುತ್ತಾ, ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿಯ ಅವ್ವೇರಹಳ್ಳಿ ಗ್ರಾಮ ಸ.ನಂ.10ರಲ್ಲಿ ಮಂಜೂರು ಮಾಡಿರುವ ಜಮೀನು ಬೆಟ್ಟ ಗುಡ್ಡಗಳಿಂದ ಅವೃತ್ತವಾಗಿದ್ದು, ಶೈಕ್ಷಣಿಕ ಉದ್ದೇಶಕ್ಕೆ ಯೋಗ್ಯವಾಗಿಲ್ಲವಾದ್ದರಿಂದ ಗಿಡದಕೋನೇನಹಳ್ಳಿಯ ಸರ್ವೆ ನಂ. 38ರಲ್ಲಿ ಖಾಲಿ ಇರುವ ಭೂಮಿಯನ್ನು ಪುನ: ಮಂಜೂರು ಮಾಡಲು ಕೋರಿರುತ್ತಾರೆ.

8. ಈ ಕುರಿತಂತೆ ಬುದ್ಧ ಎಜುಕೇಷನ್ ಸೊಸೈಟಿ ಮತ್ತು ಟ್ರಸ್ಟ್ (ರಿ) ಇವರು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:22505/2009 ಸಲ್ಲಿಸಿದ್ದರು. ಸದರಿ ನ್ಯಾಯಾಲಯವು ದಿನಾಂಕ: 01–03–2010 ರಂದು ತೀರ್ಪು ನೀಡುತ್ತಾ, ಈ ಕೆಳಗಿನಂತೆ ಸೂಚಿಸಿರುತ್ತದೆ :–

"This petition is disposed of with direction to the respondent to consider the said representation of the petitioner in accordance to law and within an outer limit of four months from date of production of the certified copy of todays orders"

9. ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು, ಇವರು ದಿನಾಂಕ:21-03-2011ರ ಪತ್ರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಗಿಡದಕೋನೆಹಳ್ಳಿ ಗ್ರಾಮದ ಸರ್ವೆ ನಂ.38 ಮತ್ತು 39 ರಲ್ಲಿ ಪ್ರಾಧಿಕಾರಕ್ಕೆ ಭೂಸ್ವಾಧೀನ ಪಡಿಸಿಕೊಂಡು 414 ನಿವೇಶನಗಳನ್ನು ಹಂಚಿಕೆ ಮಾಡಿರುವ ಹಾಗೂ ಫಲಾನುಭವಿಗಳಿಗೆ ನೋಂದಣಿ ಮಾಡಿಸಿರುವ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಿಕೊಂಡಿದ್ದ 398 ಶೆಡ್‌ಗಳನ್ನು ತೆರವುಗೊಳಿಸಿ ಜಮೀನನ್ನು ಪ್ರಾಧಿಕಾರದ ವಶಕ್ಕೆ ಪಡೆದು ಪ್ರಾಧಿಕಾರದ ಸ್ವತ್ತಿಗೆ ತಂತಿಬೇಲಿಯನ್ನು ನಿರ್ಮಾಣ ಮಾಡಿರುತ್ತಾರೆ. ಮುಂದುವರೆದು ಈ ಪ್ರದೇಶಕ್ಕೆ ಲಗತ್ತಾಗಿರುವ ಈ ಹಿಂದೆ ಈ ಶಿಕ್ಷಣ ಸಂಸ್ಥೆಗೆ ಮಂಜೂರು ಮಾಡಲಾಗಿದ್ದ 6 ಎಕರೆ ಜಾಗವನ್ನು ಹಾಗೆಯೇ ಖಿಲ್ಲಾ ಬಿಟ್ಟಿರುವುದರಿಂದ ಸದರಿ ಜಮೀನನ್ನು ಬುದ್ದ ಎಜುಕೇಷನ್ ಟ್ರಸ್ಟ್ ಮತ್ತು ಸೊಸೈಟಿ ಇವರಿಗೆ ಮಂಜೂರು ಮಾಡಬಹುದೆಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 522 ಎಲ್‌ಜಿಬಿ 2011, ಬೆಂಗಳೂರು ದಿನಾಂಕ: 23-06-2012

ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಅವ್ವೇರಹಳ್ಳಿ ಗ್ರಾಮದ ಸ.ನಂ.10 ರಲ್ಲಿ 6-00 ಎಕರೆ ಜಮೀನನ್ನು ಸರ್ಕಾರದ ಪತ್ರ ಸಂ. ಆರ್‌ಡಿ 203 ಎಲ್‌ಜಿಬಿ 2009 ದಿನಾಂಕ:23-06-2009 ರಲ್ಲಿ ನೀಡಿದ ಮಂಜೂರಾತಿ ರದ್ದುಪಡಿಸಿ ಬುದ್ದ ಎಜುಕೇಷನ್ ಸೊಸೈಟಿ ಮತ್ತು ಟ್ರಸ್ಟ್ ಇವರಿಗೆ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಗಿಡದಕೊನೇನಹಳ್ಳಿ ಗ್ರಾಮದ ಸ.ನಂ.38 ರಲ್ಲಿನ 6-00 ಎಕರೆ ವಿಸ್ತೀರ್ಣದ ಜಮೀನನ್ನು ಪುನ: ಮಂಜೂರು ಮಾಡಿ ಆ ಭೂಮಿಗೆ ಸಂಬಂಧಿಸಿದಂತೆ ಈ ಹಿಂದೆ ಮಾರುಕಟ್ಟೆ ಬೆಲೆಯ ಶೇಕಡ 50 ರಷ್ಟು ಮೊತ್ತ ಪಾವತಿಸಿದ್ದನ್ನು ಸ್ಥಿರೀಕರಿಸಲಾಗಿದೆ.

ಇದಕ್ಕೆ ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಆಇ 73 ವೆಚ್ಚ-07/2012 ದಿನಾಂಕ:07-02-2012 ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಕೆ.ರಾಮಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಭೂ.ಮಂ).

ಪಿ.ಆರ್. 1820

ಕಂದಾಯ ಸಚಿವಾಲಯ

ವಿಷಯ:- ಹಾಸನ ಜಿಲ್ಲೆಯ ಸಕಲೇಶಪುರ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ:- ಸರ್ಕಾರದ ಆದೇಶ ಸಂಖ್ಯೆ: ಕಂಇ 22 ಮುಸರ 2009, ದಿನಾಂಕ:25-02-2009

ಪ್ರಸ್ತಾವನೆ:-

ಮೇಲೆ ಓದಲಾದ ಆದೇಶದಲ್ಲಿ ಬೀದರ್ ಜಿಲ್ಲೆಯ ಬೀದರ್ (ಉತ್ತರ) ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಕೆಳಕಂಡ ಅಧಿಕಾರಿ : ಅಧಿಕಾರೇತರನ್ನು ನೇಮಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಸಕಲೇಶಪುರ ವಿಧಾನಸಭಾ ಕ್ಷೇತ್ರ.	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಜಿಲ್ಲೆ	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಕಲೇಶಪುರ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ಇತರೆ ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 34 ಮುಸರ 2012; ಬೆಂಗಳೂರು, ದಿನಾಂಕ: 26ನೇ ಜೂನ್, 2012

ಹಾಸನ ಜಿಲ್ಲೆಯ ಸಕಲೇಶಪುರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡ ವ್ಯಕ್ತಿಗಳನ್ನು ಅಧಿಕಾರೇತರ ಸದಸ್ಯರನ್ನಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ಬಾಲಕೃಷ್ಣ ಬಿನ್ ರಾಮಕೃಷ್ಣೇಗೌಡ, ಬಿರಡಹಳ್ಳಿ ಗ್ರಾಮ, ಸುಂಡೇಕೆರೆ ಅಂಚೆ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.	ಸಾಮಾನ್ಯ
2	ಶ್ರೀಮತಿ ರುಕ್ಮೀಣಿ ಕೋಂ ಮೋಹನ್, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಹೊಸೂರು, ಕಳಲೆ ಗ್ರಾಮ ಮತ್ತು ಅಂಚೆ, ಯಸಳೂರು ಹೋಬಳಿ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.	ಮಹಿಳೆ
3	ಶ್ರೀ ಸ್ವಾಮಿ ಬಿನ್ ಕೃಷ್ಣಪ್ಪನಾಯಕ, ಹರಿಹಳ್ಳಿ ಅಂಚೆ, ಆಲೂರು ತಾಲ್ಲೂಕು, ಹಾಸನ ಜಿಲ್ಲೆ.	ಪರಿಶಿಷ್ಟ ಪಂಗಡ
4	ಶ್ರೀ ಪುಟ್ಟಸ್ವಾಮಿ ಬಿನ್ ಚನ್ನಯ್ಯ, ಬಳ್ಳೆಕೆರೆ, ದುಂಡುನಾಯಕನಹಳ್ಳಿ ಅಂಚೆ, ಕಟ್ಟಾಯ ಹೋಬಳಿ, ಹಾಸನ ಜಿಲ್ಲೆ.	ಪರಿಶಿಷ್ಟ ಜಾತಿ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ:03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ಥಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ. ವಿ.ಶ್ರೀನಿವಾಸ ದೀಕ್ಷಿತ್
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 1821

ಕಂದಾಯ ಸಚಿವಾಲಯ

ವಿಷಯ:– ಮಂಡ್ಯ ಜಿಲ್ಲೆಯ ಮೇಲುಕೋಟೆ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ:– ಸರ್ಕಾರದ ಆದೇಶ ಸಂಖ್ಯೆ: ಕಂಇ 62 ಮುಸರ 2008, ದಿನಾಂಕ:25-02-2009

ಪ್ರಸ್ತಾವನೆ:–

ಮೇಲೆ ಓದಲಾದ ಆದೇಶದಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಕೆಳಕಂಡ ಅಧಿಕಾರಿ : ಅಧಿಕಾರೇತರನ್ನು ನೇಮಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಮೇಲುಕೋಟೆ ವಿಧಾನಸಭಾ ಕ್ಷೇತ್ರ.	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಜಿಲ್ಲೆ	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಂಡ್ಯ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ಇತರೆ ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 31 ಮುಸರ 2012; ಬೆಂಗಳೂರು, ದಿನಾಂಕ: 26ನೇ ಜೂನ್, 2012

ಮಂಡ್ಯ ಜಿಲ್ಲೆಯ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡ ವ್ಯಕ್ತಿಗಳನ್ನು ಅಧಿಕಾರೇತರ ಸದಸ್ಯರನ್ನಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ಶೇಖರ್ ಬಿನ್ ಪುಟ್ಟಮಾದಪ್ಪ, ಬಳೆಅತ್ತಿಗುಪ್ಪೆ, ಪಾಂಡವಪುರ ತಾಲ್ಲೂಕು	ಸಾಮಾನ್ಯ
2	ಶ್ರೀಮತಿ ಗೀತಾ ಕೋಂ ಶಶಿಕುಮಾರ್, ಪಾಂಡವಪುರ, ಪಾಂಡವಪುರ ತಾಲ್ಲೂಕು	ಮಹಿಳೆ
3	ಶ್ರೀ ದೇವರಾಜು ಬಿನ್ ದೇವಯ್ಯ, ಜಕ್ಕನಹಳ್ಳಿ, ಪಾಂಡವಪುರ ತಾಲ್ಲೂಕು	ಪರಿಶಿಷ್ಟ ಜಾತಿ
4	ಶ್ರೀ ಶ್ರೀನಿವಾಸ್ ಬಿನ್ ಕೆ. ರಾಮಸ್ವಾಮಿ, ಕಾವೇರಿಪುರ, ಚಿನಕುರುಳಿ ಹೋಬಳಿ, ಪಾಂಡವಪುರ ತಾಲ್ಲೂಕು	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ:03–02–2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ. ವಿ.ಶ್ರೀನಿವಾಸ ದೀಕ್ಷಿತ್

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 1823

ಕಂದಾಯ ಸಚಿವಾಲಯ

ವಿಷಯ :– ಕೋಲಾರ ಜಿಲ್ಲೆಯ ಮುಳಬಾಗಿಲು ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ :– (1) ಸರ್ಕಾರದ ಆದೇಶ ಸಂಖ್ಯೆ: ಕಂಇ 108 ಮುಸರ 2008, ದಿನಾಂಕ:25–02–2009

(2) ಸರ್ಕಾರದ ಆದೇಶ ಸಂಖ್ಯೆ:ಕಂಇ 108 ಮುಸರ 2008 ದಿನಾಂಕ:03.12.2009

ಪ್ರಸ್ತಾವನೆ:–

ಮೇಲೆ ಓದಲಾದ ಆದೇಶದಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಕೆಳಕಂಡ ಅಧಿಕಾರಿ : ಅಧಿಕಾರೇತರನ್ನು ನೇಮಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಮುಳಬಾಗಿಲು ವಿಧಾನಸಭಾ ಕ್ಷೇತ್ರ.	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ ಜಿಲ್ಲೆ	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮುಳಬಾಗಿಲು ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಜನ ಅಧಿಕಾರೇತರ ಸದಸ್ಯರನ್ನು ಪ್ರತ್ಯೇಕವಾಗಿ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು. ನಂತರ, ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಈ ಕೆಳಕಂಡ ನಾಲ್ಕು ವ್ಯಕ್ತಿಗಳನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಲಾಗಿತ್ತು.

1	ಶ್ರೀ ಮುನಿರಾಜು ಬಿನ್ ನಾರಾಯಣಪ್ಪ, ಸೊನ್ನವಾಡಿ ಗ್ರಾಮ ಮತ್ತು ಅಂಚೆ, ಮುಳಬಾಗಿಲು ತಾಲ್ಲೂಕು (ಸಾಮಾನ್ಯ)	ಸದಸ್ಯರು
2	ಶ್ರೀಮತಿ ಸುನಂದಮ್ಮ ಕೋಂ ಅಂಬರೀಶ್, ರಾಜೇಂದ್ರಹಳ್ಳಿ ಗ್ರಾಮ ಮತ್ತು ಅಂಚೆ, ಮುಳಬಾಗಿಲು ತಾಲ್ಲೂಕು (ಮಹಿಳೆ)	ಸದಸ್ಯರು

3	ಶ್ರೀ ಸೀನಪ್ಪ ಬಿನ್ ನಾರಾಯಣಪ್ಪ, ಪಿಚ್ಚಗುಂಡ್ಲಹಳ್ಳಿ, ಆಲಂಗೂರು ಅಂಚೆ, ಮುಳಬಾಗಿಲು ತಾಲ್ಲೂಕು (ಪ. ಜಾತಿ)	ಸದಸ್ಯರು
4	ಶ್ರೀ ರೆಡ್ಡಪ್ಪ ಬಿನ್ ಮುನಿವೆಂಕಟಪ್ಪ, ಗುಡಿಪಲ್ಲಿ, ಗುಡಿಪಲ್ಲಿ ಅಂಚೆ, ಮುಳಬಾಗಿಲು ತಾಲ್ಲೂಕು (ಪ. ಪಂಗಡ)	ಸದಸ್ಯರು

ಆ ಹಿನ್ನಲೆಯಲ್ಲಿ ಮನಃ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 33 ಮುಸರ 2012; ಬೆಂಗಳೂರು, ದಿನಾಂಕ: 26ನೇ ಜೂನ್ 2012

ಕೋಲಾರ ಜಿಲ್ಲೆಯ ಮುಳಬಾಗಿಲು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶ ಸಂಖ್ಯೆ ಕಂಇ 108 ಮುಸರ 2008 ದಿನಾಂಕ:03–12–2009ನ್ನು ರದ್ದುಪಡಿಸಿ, ಸದರಿ ಆರಾಧನಾ ಸಮಿತಿಗೆ ಈ ಕೆಳಕಂಡ ವ್ಯಕ್ತಿಗಳನ್ನು ಅಧಿಕಾರೇತರ ಸದಸ್ಯರನ್ನಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ಎಂ.ಪಿ. ನಾಗಭೂಷಣ್ ಬಿನ್ ಪ್ರದ್ಯುಮ್ನಾಚಾರ್, ಕುಂಬಾರಪೇಟೆ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ	ಸಾಮಾನ್ಯ
2	ಶ್ರೀಮತಿ ಹೇಮಲತಾ ಕೋಂ ದೇವೇಂದ್ರಗುಪ್ತಾ, ನಂಗಲಿ ಗ್ರಾಮ ಮತ್ತು ಅಂಚೆ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ	ಮಹಿಳೆ
3	ಶ್ರೀ ವೆಂಕಟೇಶ್ ಬಿನ್ ಗಂಗಪ್ಪ, ತಾಯಲೂರು ಗ್ರಾಮ ಮತ್ತು ಅಂಚೆ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ	ಪರಿಶಿಷ್ಟ ಜಾತಿ
4	ಶ್ರೀ ವಿ.ವಿ. ವೆಂಕಟೇಶ್ ಬಿನ್ ವೆಂಕಟಪ್ಪ, ಮುತ್ಯಾಲಪೇಟೆ, ಕಾಮಾಕ್ಷಮ್ಮ ಗುಡಿ ರಸ್ತೆ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ	ಪರಿಶಿಷ್ಟ ಪಂಗಡ

